<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಿದ ದಿನಾಂಕ **21-09-2021**</u>

ಪಾಟೀ ಸವಾಲು - 10 ನೇ ಪ್ರತಿವಾದಿ ಪರ ಶ್ರೀ. ಕೆ.ಎಸ್. ಬಿ., ವಕೀಲರಿಂದ

4) ನನ್ನ ತಂದೆಯ ಹೆಸರು ಮುನಿಶಾಮಪ್ಪ. ಅವರು 1995 ರಲ್ಲಿ ಮೃತ ಪಟ್ಟರು. ನನ್ನ ತಾಯಿಯ ಹೆಸರು ಪಿಳ್ಳಮ್ಮ. ಅವರು 2000 ನೇ ಇಸವಿಯಲ್ಲಿ ಮೃತ ಪಟ್ಟರು. ನನ್ನ ತಂದೆಗೆ ಯಾರೂ ಅಣ್ಣ ತಮ್ಮಂದಿರು ಇರಲಿಲ್ಲ. ನನ್ನ ತಂದೆ ನನ್ನ ತಾತನಿಗೆ ಒಬ್ಬನೇ ಮಗನಾಗಿದ್ದರು. ನನ್ನ ತಾತನ ಹೆಸರು ನರಸಿಂಹಯ್ಯ. ನನ್ನ ತಾತನ ಹೆಸರಿಗೆ ಆಸ್ತಿಗಳು ಇದ್ದವು. ಈ ದಾವೆಯ ದಾವಾ ಸ್ವತ್ತು ಅಲ್ಲದೇ ನನ್ನ ತಾತನಿಗೆ ಇನ್ನೂ 10 ಎಕರೆ ಆಸ್ತಿ ಇರುತ್ತದೆ. ಸದರಿ 10 ಎಕರೆ ಆಸ್ತಿ ಹೊಸಹೂಡ್ಯ ಗ್ರಾಮದಲ್ಲಿರುತ್ತದೆ. ಸದರಿ 10 ಎಕರೆಗಳ ಕೆಲವು ಸರ್ವೆ ನಂಬರ್ಗಳು ಹೇಳಬಲ್ಲೆ, ಅವು 9/3, 10/1, 12/3, 12/4, 11/3, 11/2, 41, 32/2 ಮತ್ತು 33/3 ಇರುತ್ತವೆ. ಸರ್ವೆ ನಂ.9/3 ರಲ್ಲಿ ನನ್ನ ಭಾಗಕ್ಕೆ 13 ಗುಂಟೆ ಬಂದಿದೆ ಮತ್ತು ಉಳಿದ ವಿಸ್ತೀರ್ಣ 1 ನೇ ಪ್ರತಿವಾದಿಗೆ ಹೋಗಿದೆ. ಸರ್ವೆ ನಂ.10/1 ರ ವಿಸ್ತೀರ್ಣ 2 ಎಕರೆ 16 ಗುಂಟೆ ಇರುತ್ತದೆ. ಅದರಲ್ಲಿ ನನಗೆ ಮತ್ತು 1 ನೇ ಪ್ರತಿವಾದಿಗೆ ತಲಾ 1 ಎಕರೆ 8 ಗುಂಟೆ ಭಾಗಕ್ಕೆ ಬಂದಿದೆ. ಹೊಸಹೂಡ್ಯ ಗ್ರಾಮದಲ್ಲಿರುವ ಮೇಲ್ಕಂಡ ಎಲ್ಲಾ ಸರ್ವೆ ನಂಬರ್ಗಳಲ್ಲೂ ನನಗೆ ಮತ್ತು 1 ನೇ ಪ್ರತಿವಾದಿಗೆ ತಲಾ ಅರ್ಧ ಭಾಗದ ಹಿಸ್ಸೆ ಬಂದಿರುತ್ತದೆ. ಕಾರಹಳ್ಳಿಯಲ್ಲಿ ನನ್ನ ತಂದೆ ಖರೀದಿಸಿದ್ದ ಸರ್ವೆ ನಂ.100/1 ಇರುತ್ತದೆ. ನನ್ನ ತಂದೆಯ ಮರಣಾನಂತರ ಅದನ್ನು 1 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ. ನನಗೆ ಮತ್ತು 1 ನೇ ಪ್ರತಿವಾದಿಗೆ 1992-93 ರಲ್ಲಿ ವಿಭಾಗವಾಗಿತ್ತು. ವಿಭಾಗವಾದ ನಿಖರವಾದ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಸದರಿ ವಿಭಾಗವಾದ ನಂತರ ನನಗೆ ಮತ್ತು 1 ನೇ ಪ್ರತಿವಾದಿಗೆ ವಿಭಾಗದಲ್ಲಿ ಬಂದ ಎಲ್ಲಾ ಆಸ್ತಿಗಳ ಖಾತೆಗಳು ನಮ್ಮ ನಮ್ಮ ಹೆಸರುಗಳಿಗೆ ಬದಲಾಗಿವೆಯೇ ಎಂದರೆ ಬದಲಾಗಿವೆ. ನಮ್ಮ ಹೆಸರಿಗೆ ಖಾತೆ ಬದಲಾವಣೆ

ಕೂಡ 1992-93 ರಲ್ಲೇ ಆಗಿತ್ತು. ಸದರಿ ವಿಭಾಗವನ್ನು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣಿ ಮಾಡಿಸಿದ್ದೆವು. ನನಗೆ ನೋಂದಾಯಿತ ವಿಭಾಗ ಪತ್ರವನ್ನು ಹಾಜರು ಪಡಿಸಲು ತೊಂದರೆ ಇದೆಯೇ? ಎಂದರೆ ತೊಂದರೆ ಇಲ್ಲ. ವಿಭಾಗದಲ್ಲಿ ನಮ್ಮ ನಮ್ಮ ಹೆಸರಿಗೆ ಖಾತೆಯಾಗಿರುವ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇದೆಯೇ? ಎಂದರೆ ತೊಂದರೆ ಇಲ್ಲ. ಈ ದಾವೆಯಲ್ಲಿ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ 1992-93 ರಲ್ಲಿ ವಿಭಾಗವಾಗಿರುವ ಸಂಗತಿಯನ್ನು ನಾನು ತಿಳಿಸಿಲ್ಲ. ತಿಳಿಸಲು ತೊಂದರೆ ಇರಲಿಲ್ಲ ಎಂದರೆ ನನಗೆ ಅದರ ಅವಶ್ಯಕತೆ ಇರಲಿಲ್ಲ. ದಾವಾ ಸ್ವತ್ತನ್ನು 1992-93 ರಲ್ಲಿ ಆದ ವಿಭಾಗ ಪತ್ರದಲ್ಲಿ ಸೇರಿಸಿರಲಿಲ್ಲ. ಹೊಸಹೂಡ್ಯ ಗ್ರಾಮದಲ್ಲಿದ್ದ ಆಸ್ತಿಗಳ ಬಗ್ಗೆ ವಾದ ಪತ್ರದಲ್ಲಿ ತಿಳಿಸಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ್ 100/1 ಇರುತ್ತದೆ. ಸರ್ವೆ ನಂ.100/1 ರಲ್ಲಿ ನನಗೆ 1 ಎಕರೆ 3 ಗುಂಟೆ ಇದ್ದು ಅದರ ಒಟ್ಟು ವಿಸ್ತೀರ್ಣ ಎಷ್ಟೆಂದು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ದಾವಾ ಸ್ವತ್ತಿನ ಪಹಣಿಯನ್ನು ನೋಡಿದ್ದೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಸರ್ವೆ ನಂ.99, ಪಶ್ಚಿಮಕ್ಕೆ ಸರ್ವೆ ನಂ.101/6, ಉತ್ತರಕ್ಕೆ ಸರ್ವೆ ನಂ.93 ಮತ್ತು ದಕ್ಷಿಣಕ್ಕೆ ಲೀಲಾವತಿಯವರ ಜಮೀನು ಇರುತ್ತವೆ. ಸದರಿ ಲೀಲಾವತಿ ಈ ದಾವೆಯ 10ನೇ ಪ್ರತಿವಾದಿ ಎಂದರೆ ಸರಿ. ಸರ್ವೆ ನಂ.101/6 ರಲ್ಲಿ ಒಟ್ಟು 2 ಎಕರೆ 6 ಗುಂಟೆ ಜಮೀನಿದೆ ಎಂದರೆ ಸರಿ. ದಿ.30-01-2008 ರಲ್ಲಿ 10ನೇ ಪ್ರತಿವಾದಿ ಸದರಿ 1 ಎಕರೆ 3 ಗುಂಟೆ ಜಮೀನನ್ನು ದ್ಯಾವಪ್ಪನಿಂದ ಖರೀದಿ ಮಾಡಿದ್ದಾರೆ ಎಂದರೆ ಮಾಡಿರಬಹುದು, ನನಗೆ ಗೊತ್ತಿಲ್ಲ. ದಿ.03-07-2006 ರಂದು 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು ದಾವಾ ಸ್ವತ್ತನ್ನು 7ನೇ ಪ್ರತಿವಾದಿಗೆ ಕ್ರಯ ಮಾಡಿದ್ದಾರೆ ಎಂದರೆ ನನ್ನ ಅಣ್ಣ ಬೋಗಸ್ ಮಾಡಿದ್ದಾರೆ, ಸ್ವಾಧೀನದಲ್ಲಿ ನಾನೇ ಇದ್ದೇನೆ. ನಾನೇ ಸ್ವಾಧೀನದಲ್ಲಿದ್ದೇನೆ ಎಂಬ ಬಗ್ಗೆ ದಾಖಲೆ ಹಾಜರು ಮಾಡಿದ್ದೀನಾ? ಎಂದರೆ ಕೇಳಿಲ್ಲವಾದ್ದರಿಂದ ಹಾಜರು ಮಾಡಿಲ್ಲ. ಯಾವ ಕಾರಣಕ್ಕೆ ದಾವಾ ಸ್ವತ್ತನ್ನು 1992-93 ರಲ್ಲಿ ಆದ ವಿಭಾಗದಲ್ಲಿ ಸೇರಿಸಲಿಲ್ಲ ಎಂದರೆ ನಮ್ಮ ತಂದೆ ಅದು ಬೇರೆ ಊರಿನಲ್ಲಿದೆ, ಅಲ್ಲೇ ಇರಲಿ ಬಿಡಿ ಎಂದಿದ್ದರಿಂದ ದಾವ ಸ್ವತ್ತನ್ನು

ಹಿಂದಿನ ಪಾಲು ವಿಭಾಗದಲ್ಲಿ ಸೇರಿಸಿರಲಿಲ್ಲ. ವಿಭಾಗ ಪತ್ರದಲ್ಲಿ ದಾವಾ ಸ್ವತ್ತು ಕಾರೇಹಳ್ಳಿಯಲ್ಲಿದೆ, ಅದನ್ನು ವಿಭಾಗದಲ್ಲಿ ಸೇರಿಸಿಲ್ಲ ಎಂದು ನಮೂದು ಮಾಡಿದ್ದೀವಾ ಎಂದರೆ ಮಾಡಿಲ್ಲ. ವಿಭಾಗವಾಗತಕ್ಕ ಇನ್ನೊಂದು ಆಸ್ತಿ ಇನ್ನೂ ಉಳಿದಿದೆ ಎಂದು ವಿಭಾಗ ಪತ್ರದಲ್ಲಿ ಬರೆಯಿಸಲು ತೊಂದರೆ ಇತ್ತೇ? ಎಂದರೆ ತೊಂದರೆ ಏನೂ ಇರಲಿಲ್ಲ. ದಾವಾ ಸ್ವತ್ತನ್ನು ನನ್ನ ತಂದೆ ಕಾರೇಹಳ್ಳಿಯ ಶಾಮಣ್ಣನಿಂದ ಖರೀದಿ ಮಾಡಿದ್ದರು. ನಾನು ಮತ್ತೆ ಹೇಳುತ್ತೇನೆ ಈಶ್ವರಾಚಾರ್ ಕಡೆಯಿಂದ ಖರೀದಿ ಮಾಡಿದ್ದರು. ನನಗೆ ಸದರಿ ಕ್ರಯಪತ್ರದ ದಿನಾಂಕ, ತಿಂಗಳು ಮತ್ತು ವರ್ಷ ಗೊತ್ತಿಲ್ಲ. ದಾವಾ ಸ್ವತ್ತನ್ನು ಮುಂಚೆಯಿಂದಲೂ ನಾನೇ ವ್ಯವಸಾಯ ಮಾಡುತ್ತಿದ್ದೇನೆ. ನಾನು 1990 ರಿಂದಲೂ ದಾವಾ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದೇನೆ. ಅದಕ್ಕಿಂತ ಹಿಂದೆ ನಮ್ಮ ತಂದೆ ಮಾಡುತ್ತಿದ್ದರು. ನಾನು ಮತ್ತೆ ಹೇಳುತ್ತೇನೆ ನನ್ನ ತಂದೆಗೆ ವಯಸ್ಸಾದ ನಂತರ ದಾವಾ ಸ್ವತ್ತನ್ನು ನಾನೇ ಉಳುಮೆ ಮಾಡುತ್ತಿದ್ದೇನೆ. 1990 ರಿಂದ ಇಲ್ಲಿಯವರೆಗೂ ನಾನೇ ಉಳುಮೆ ಮಾಡುತ್ತಿದ್ದೇನೆ. ದಾವಾ ಸ್ವತ್ತಿನ ಕಂದಾಯ ದಾಖಲೆಗಳು ಮೊದಲು ನನ್ನ ತಂದೆ ಹೆಸರಿನಲ್ಲಿದ್ದವು. 1995 ರ ವರೆಗೂ ಅಂದರೆ ನನ್ನ ತಂದೆ ಮೃತ ಪಡುವವರೆಗೂ ಅವು ನನ್ನ ತಂದೆಯ ಹೆಸರಿನಲ್ಲೇ ಇದ್ದವು. ಆನಂತರ ಕಂದಾಯ ದಾಖಲೆಗಳು ನನ್ನ ಅಣ್ಣ 1 ನೇ ಪ್ರತಿವಾದಿ ಹೆಸರಿಗೆ ಬದಲಾದವು. 2010 ರ ವರೆಗೂ ಕಂದಾಯ ದಾಖಲೆಗಳು ನನ್ನ ಅಣ್ಣನ ಹೆಸರಿನಲ್ಲೇ ಇದ್ದವು.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದುಡಿತು**).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.